**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಸ್.ಸಿ. ಸಂಖ್ಯೆಃ 16/2023**

ದಿನಾಂಕಃ 17.03.2025
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ದೋ.ಪ. -14 ಅ.ಸಾ -2

| | | |
|---|---|---|
| ಹೆಸರು | ಃ | ಶ್ರೀ. ಆಯನ್ ಪಾಷ |
| ತಂದೆಯ ಹೆಸರು | ಃ | ಜಹೀರ್ ಪಾಷ |
| ವಯಸ್ಸು | ಃ | 17 ವರ್ಷ |
| ಉದ್ಯೋಗ | ಃ | - |
| ವಾಸಸ್ಥಳ | ಃ | ರಾಮನಗರ |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿ ನನ್ನ ತಂದೆ, ಮೃತಳು ನನ್ನ ತಾಯಿ. ನನಗೆ ಒಬ್ಬ ತಮ್ಮ ಮತ್ತು ಮೂರು ಜನ ತಂಗಿಯರು ಇದ್ದಾರೆ. 2022 ರಲ್ಲಿ ನನ್ನ ತಂದೆ,ತಾಯಿ ಮತ್ತು ನಾವು ಬೆಂಗಳೂರಿನ ಶಾಮಣ್ಣ ಗಾರ್ಡನ್ ನಲ್ಲಿ ವಾಸ ಇದ್ದೇವು. ನಂತರ ನಾವು ರಾಮನಗರದ ರೆಹಮಾನಿಯ ನಗರಕ್ಕೆ ಬಂದಿದ್ದೇವು. ನಮ್ಮ ತಂದೆ ರಾಮನಗರಕ್ಕೆ ನಮ್ಮನ್ನು ಕರೆದುಕೊಂಡು ಬಂದಿದ್ದರು. ನನ್ನ ತಂದೆ ಬೆಂಗಳೂರಿನಲ್ಲಿ ಆಟೋ ಚಾಲನೆ ಮಾಡುತ್ತಿದ್ದರು. ರಾಮನಗರದಿಂದ ಪ್ರತಿದಿನ ನನ್ನ ತಂದೆ ಬೆಂಗಳೂರಿಗೆ ಹೋಗುತ್ತಿದ್ದರು. ಪ್ರತಿದಿನ ರಾತ್ರಿ 10.00 ಗಂಟೆ ನನ್ನ ತಂದೆ ವಾಪಸ್ಸು ಬರುತ್ತಿದ್ದರು. ದಿನಾಂಕ 16.04.2022 ರಂದು ರಾತ್ರಿ 10.30 ಕ್ಕೆ ನನ್ನ ತಂದೆ, ಬೆಂಗಳೂರಿನಿಂದ ಬಂದಿದ್ದು ನಾನು, ನನ್ನ ತಂದೆ, ತಾಯಿ ಮತ್ತು

ಉಳಿದ ಮಕ್ಕಳೆಲ್ಲಾ ಇದ್ದೆವು. ನನ್ನ ತಂದೆ, ತಾಯಿ ಮಲಗುವುದಕ್ಕೆ ಮೊದಲು ಜಗಳ ಮಾಡಿಕೊಂಡಿದ್ದರು. ರಾತ್ರಿ ಸುಮಾರು 12.30 ರ ಸಮಯಕ್ಕೆ ನನ್ನ ತಂಗಿ ದೋಷಾರೋಪಣೆ ಸಾಕ್ಷಿ-15 ಎಚ್ಚರಗೊಂಡಳು. ನನ್ನ ತಂಗಿ ನನ್ನ ತಂದೆ ನನ್ನ ತಾಯಿಯ ಹೊಟ್ಟೆಗೆ ಚಾಕು ಚುಚ್ಚುತ್ತಿದ್ದು ನೋಡಿ ನನ್ನನ್ನು ಎಬ್ಬಿಸಿದಳು. ನಾನು ಎದ್ದು ನೋಡಿದಾಗ ನನ್ನ ತಂದೆ ನನ್ನ ತಾಯಿ ಹೊಟ್ಟೆ ಬಳಿ ಚಾಕುವಿನಿಂದ ಚುಚ್ಚುತ್ತಿದ್ದ.

ನಾನು ಹಿಡಿಯಲು ಹೋಗಿದ್ದು ನನ್ನನ್ನು ನನ್ನ ತಂದೆ ತಳ್ಳಿದ್ದ. ಚಾಕು ನನ್ನ ತಾಯಿಯ ಹೊಟ್ಟೆಯಲ್ಲಿ ಇತ್ತು. ನನ್ನ ತಂದೆ ಅಲ್ಲಿಂದ ಓಡಿ ಹೋದರು. ನಾನು ನನ್ನ ತಾತನನ್ನು ಕರೆದುಕೊಂಡು ಬರಲು ಹೋಗಿದ್ದು ಯಾರೋ ನನಗೆ ಸಿಕ್ಕಿದ್ದು ಅವರು ನನ್ನನ್ನು ವಿಚಾರಿಸಿದಾಗ ವಿಷಯ ಹೇಳಿದ್ದು ನಂತರ ನನ್ನ ತಾತನ ಮನೆ ಬಳಿ ಕರೆದುಕೊಂಡು ಹೋದರು. ನಂತರ ನನ್ನ ತಾತ ಮನೆ ಬಳಿ ಬಂದಿದ್ದು ಆ ಮೇಲೆ ಈ ಕುರಿತು ಪೋಲಿಸರಿಗೆ ವಿಚಾರ ತಿಳಿಸಿರುತ್ತೇವೆ. ಪೋಲಿಸರು ನನ್ನನ್ನು ವಿಚಾರಿಸಿದ್ದು ಈ ಕುರಿತು ಹೇಳಿಕೆ ನೀಡಿರುತ್ತೇನೆ. ನಾನು ನನ್ನ ಮಾವ ಸೈಯದ್ ಸಮೀ ಗೆ ಉರ್ದುವಿನಲ್ಲಿ ಹೇಳಿದ್ದು ನನ್ನ ಮಾವ ಪೋಲಿಸರಿಗೆ ಕನ್ನಡದಲ್ಲಿ ಹೇಳಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಚಾಕುವನ್ನು ನೋಡಿ ನನ್ನ ತಂದೆ ನನ್ನ ತಾಯಿಗೆ ಚುಚ್ಚಿದ ಚಾಕು ಎಂದು

ಗುರುತಿಸಿದ್ದು. ಸದರಿ ಚಾಕುವನ್ನು **ಮು.ಮಾ.3** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ. ಕೆ ವಿಜಯ್ ಕುಮಾರ್, ಸಿ ಎಲ್ ಎ ಡಿ ಸಿ ದೋಷಾರೋಪಣೆ ಪಟ್ಟಿ ಸಾಕ್ಷಿ- 15 ಈ ಸಾಕ್ಷಿಯ ಅಪ್ರಾಪ್ತ ಬಾಲಕಿ / ತಂಗಿಯಾಗಿದ್ದು ಇಬ್ಬರು ಪ್ರತ್ಯಕ್ಷ ಸಾಕ್ಷಿಗಳಾಗಿದ್ದು ಇಬ್ಬರನ್ನು ಒಟ್ಟಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.</u>**

**<u>ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ. ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.